

## ಮೆಟಾವರ್ಸ್ ಸಂತೆ

ಮೆಟಾವರ್ಸ್ ಇನ್ನೂ ಶೈಶವಾವಸ್ಥೆಯಲ್ಲಿದೆ ಹಾಗೂ ಪೂರ್ಣ ಪ್ರಮಾಣದಲ್ಲಿ ಚಾಲ್ತಿಗೆ ಬರಲು ಹಲವು ವರ್ಷಗಳೇ ಬೇಕು. ಈ ಹಂತದಲ್ಲೂ ಕೂಡಾ ಅಲ್ಲಿಯ ಮಾರಾಟ ಮೇಳ ಜೋರಾಗಿಯೇ ನಡೆಯುತ್ತಿದೆ.

- ವರ್ಚುವಲ್ ರಿಯಾಲಿಟಿ ಜಗತ್ತಿನಲ್ಲಿ ಬಳಸಬಹುದಾದ ಬ್ಯಾಗು, ಜಾಕೆಟ್ಟು, ಕೈಗಡಿಯಾರ ಇಂಥ ವಸ್ತುಗಳು ಈಗಾಗಲೇ ಬಿಕರಿಯಾಗುತ್ತಿವೆ. ಫ್ಯಾಷನ್ ಲೋಕದ ಖ್ಯಾತ ಬ್ರಾಂಡ್ ಆದ GUCCIಯ ಡಿಜಿಟಲ್ ವ್ಯಾನಿಟಿ ಬ್ಯಾಗೊಂದು ಮೂವತ್ತೈದು ಸಾವಿರ ರೂಪಾಯಿಗೆ ಮಾರಾಟವಾಗಿದೆಯಂತೆ. ಇದೇ ಚೀಲ ಭೂಮಿಯ ಮೇಲೆ ಭೌತಿಕವಾಗಿ ಇದಕ್ಕೂ ಕಡಿಮೆ ಬೆಲೆಯಲ್ಲಿ ಲಭ್ಯ.
- ಮೆಟಾವರ್ಸನ್ನು ಪ್ರವೇಶಿಸಲು ಬೇಕಾದ AR (Augmented Reality) ಕನ್ನಡಕಗಳನ್ನು ಸ್ಯಾಮ್‌ಸಂಗ್, ಕ್ಸಿಯೋಮಿ ಇತ್ಯಾದಿ ಕಂಪನಿಗಳು ಈಗಾಗಲೇ ಮಾರುಕಟ್ಟೆಗೆ ಬಿಡುಗಡೆ ಮಾಡಿವೆ.
- ಎಲ್ಲಕ್ಕಿಂತ ಜೋರಾಗಿ ನಡೆಯುತ್ತಿರುವುದು ರಿಯಲ್ ಎಸ್ಟೇಟ್ ದಂಧೆ. ಡಿಜಿಟಲ್ ಜಮೀನಿನ ಬೆಲೆ ದಿನದಿಂದ ದಿನಕ್ಕೆ ಹೆಚ್ಚುತ್ತಲಿದೆ ಹಾಗೇ ಖರೀದಿದಾರರ ಸಂಖ್ಯೆ ಕೂಡ. 'ರಿಪಬ್ಲಿಕ್ ರಿಯಲಮ್' ಎನ್ನುವ ಕಂಪನಿ ಬರೋಬ್ಬರಿ 35 ಕೋಟಿ ರೂಪಾಯಿ ನೀಡಿ ವರ್ಚುವಲ್ ಲ್ಯಾಂಡನ್ನು ಖರೀದಿಸಿದ ಸುದ್ದಿ ಕೆಲವು ವಾರಗಳ ಹಿಂದಷ್ಟೇ ಅಮೆರಿಕದ ವಾಲ್ ಸ್ಟ್ರೀಟ್ ಪತ್ರಿಕೆಯಲ್ಲಿ ಪ್ರಕಟವಾಗಿದೆ.
- 'ಸ್ಯಾಂಡ್ ಬಾಕ್ಸ್' ಅನ್ನುವ ಮೆಟಾವರ್ಸ್ ಕಂಪನಿಯೊಂದು ತಿಂಗಳಿಗೆ ಹತ್ತರಿಂದ ಹದಿನೈದು ಕೋಟಿ ಮೌಲ್ಯದ ಡಿಜಿಟಲ್ ಲ್ಯಾಂಡ್ ಮಾರಾಟದ ವಹಿವಾಟು ನಡೆಸುತ್ತದಂತೆ.

ನಿಮ್ಮ ಮಿತ್ರರೆಲ್ಲ ಒಂದೆಡೆ ಸೇರಿ ಚಹಾಕೂಟ ಮಾಡಬಹುದು; ಬೇಕಾದ ಸಮಯದಲ್ಲಿ ಬೇಕಾದ ಜಾಗದಲ್ಲಿ... ಹೀಗೆ ಹೇಳುತ್ತ ಹೊರಟರೆ ಪಟ್ಟಿ ಮುಗಿಯುವುದಿಲ್ಲ.

ಹಾಗೇಯೇ 'ಮೆಟಾವರ್ಸ್'ನ ಬಗ್ಗೆ ಇಷ್ಟು ಹೇಳಿಬಿಟ್ಟರೆ ಅದು ಕುರುಡನೊಬ್ಬ ಆನೆಯನ್ನು ಮುಟ್ಟಿ ಅದರ ಆಕಾರ–ಗಾತ್ರ ಊಹಿಸಿದಂತೆ ಆಗುವ ಸಾಧ್ಯತೆಯೇ ಹೆಚ್ಚು. ನಮಗೆ ಎಂಬತ್ತರ ದಶಕದಲ್ಲಿ ಕಂಪ್ಯೂಟರಿನ ಬಗ್ಗೆ, ತೊಂಬತ್ತರ ದಶಕದಲ್ಲಿ ಇಂಟರ್ನೆಟ್ಟಿನ ಬಗ್ಗೆ, ಅದನಂತರದ ವರ್ಷಗಳಲ್ಲಿ ಸ್ಮಾರ್ಟ್ ಫೋನಿನ ಬಗ್ಗೆ ಎಷ್ಟು ಕನಿಷ್ಠ ಮಾಹಿತಿ ಇತ್ತೋ ಅಷ್ಟು ಮಾತ್ರ ವಿಷಯ ಇವತ್ತು ನಮಗೆ ಮೆಟಾವರ್ಸಿನ ಬಗ್ಗೆಯೂ ತಿಳಿದಿರುವುದು. ಆದರೆ ಸ್ಮಾರ್ಟ್ ಫೋನು ಹಾಗೂ ಅಂತರ್ಜಾಲವನ್ನು ಇಂದು ಹೇಗೆ ಬಿಟ್ಟಿರಲಾರೆವೋ ಹಾಗೇ ಮುಂದೊಂದು ದಿನ 'ಮೆಟಾವರ್ಸ್' ನಮ್ಮ ನಿತ್ಯ ಜೀವನದ ಭಾಗವೇ ಆದೀತು ಎಂದರೆ ಅದು ಅತಿಶಯೋಕ್ತಿಯೇನಲ್ಲ.

### 'ಮೆಟಾವರ್ಸ್'ನ ವಿವಿಧ ಹಂತಗಳು

ಸಾಕಷ್ಟು ಚರ್ಚೆಯಾಗುತ್ತಿದ್ದರೂ, ಫೇಸ್‌ಬುಕ್ ಹೆಸರಿನ ಜೊತೆ 'ಮೆಟಾ' ಲೋಗೊ ಆಗಲೇ ಸೇರಿಕೊಂಡಿದ್ದರೂ, ಈ ಮೆಟಾವರ್ಸ್ ನಮ್ಮ ಬಳಕೆಗೆ ಹಂತ ಹಂತವಾಗಿ ತೆರೆದುಕೊಳ್ಳಲಿದೆ. ಅದರ ಬಗ್ಗೆ ಸಾಕಷ್ಟು ಸಂಶೋಧನೆಗಳು ಸಮರೋಪಾದಿಯಲ್ಲಿ ನಡೆಯುತ್ತಿವೆ. ಇದು ಹೀಗೇ, ಇಷ್ಟೇ ಎಂದು ನಿಖರವಾಗಿ ವಿಂಗಡಿಸಲಾಗದಿದ್ದರೂ, 'ಮೆಟಾವರ್ಸ್'ನ ಬೆಳವಣಿಗೆಯನ್ನು ಸ್ಥೂಲವಾಗಿ ಈ ಮೂರು ಹಂತಗಳಲ್ಲಿ ಗಮನಿಸಬಹುದು.

**ಹಂತ 1:** ವೈ–ಫೈ ಸಂಪರ್ಕ ಉಳ್ಳ, ಒಳಗಡೆಯೇ ಒಂದು ಸಣ್ಣ ಪರದೆ ಇರುವ, ದಪ್ಪ–ಅಗಲದ ಕನ್ನಡಕ ಹಾಕಿಕೊಂಡು, ವರ್ಚುವಲ್ ಜಗತ್ತನ್ನು ನಾವು ಪ್ರವೇಶಿಸಬಹುದು. ಕೈಗಳಲ್ಲಿಯ ರಿಮೋಟ್ ಮೂಲಕ ಹೊಸ ಜಗತ್ತಿನ ಚಲನವಲನಗಳನ್ನು ನಿಯಂತ್ರಿಸಬಹುದು. ನೋಡುವುದು, ಕೇಳುವುದು ಸೇರಿದಂತೆ ಅಲ್ಪ ಪ್ರಮಾಣದ ಸ್ಪರ್ಶದ ಅನುಭವವನ್ನೂ ನಾವು ವರ್ಚುವಲ್ ಲೋಕದಲ್ಲಿ ಪಡೆಯಬಹುದು. ಈ ಹಂತ ನಮಗೆ ಹೆಚ್ಚು ಕಮ್ಮಿ ಶೇ. 50ರಷ್ಟು 'ಮೆಟಾವರ್ಸ್' ಅನುಭೂತಿಯನ್ನು ದಕ್ಕಿಸಿಕೊಡುತ್ತದೆ. ಇಂದು ನಾವು ಈ ಹಂತವನ್ನು ತಲುಪುವ ಹೊಸ್ತಿಲಲ್ಲಿದ್ದೇವೆ.

**ಹಂತ 2:** ಎಲೆಕ್ಟ್ರಾನಿಕ್ ತರಂಗಗಳ ಮೂಲಕ ಉದ್ದೀಪಿತವಾಗುವಂತ ಶೂಸ್, ವಿಶೇಷ ಕೈಗವಸು, ಜಾಕೆಟ್ ಧರಿಸಿ, ವಿವಿಧ ದಿಕ್ಕುಗಳಲ್ಲಿ ಚಲಿಸಬಲ್ಲ ಟ್ರೆಡ್‌ಮಿಲ್ ಮೇಲೆ ನಿಂತು ವರ್ಚುವಲ್ ಜಗತ್ತನ್ನು ಪ್ರವೇಶಿಸಿದರೆ ಸಿಗುವ ಅನುಭವವೇ ಬೇರೆ. ಆ ಬೀದಿಗಳಲ್ಲಿ ನಡೆದಾಡುತ್ತ,

